ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೪ಎ Part – IVA	ಬೆಂಗಳೂರು, **ಗುರುವಾರ,** ೦೫, ನವೆಂಬರ್, ೨೦೨೬ (ಕಾರ್ತಿಕಾ , ೧೪, ಶಕವರ್ಷ, ೧೯೪೮) BENGALURU,THURSDAY, 05, NOVEMBER, 2026 (KARTHIKA , 14, SHAKAVARSHA, 1948)	ನಂ. ೧೩೩೩ No. 1333

ಕರ್ನಾಟಕ ಸರ್ಕಾರ

ಸಂ. ಪಸಂಮೀ 273 ಸಲೆವಿ 2024 (ಭಾಗ-1)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ
ಡಾ|| ಬಿ.ಆರ್. ಅಂಬೇಡ್ಕರ್ ವೀದಿ
ಬೆಂಗಳೂರು, ದಿನಾಂಕ:03.11.2026

ಅಧಿಸೂಚನೆ

The Karnataka Prevention of Slaughter and Preservation of Cattle (Transportation of Cattle) Rules, 2021 (ಅಧಿಸೂಚನೆ ಸಂಖ್ಯೆ:ಪಸಂಮೀ 261 ಸಲೆವಿ 2015 ಭಾಗ-1, ದಿನಾಂಕ:24.05.2021 ರ ಅಧಿಸೂಚನೆಯನ್ನು ದಿನಾಂಕ:27ನೇ ಮೇ 2021ರ ಕರ್ನಾಟಕ ರಾಜ್ಯಪತ್ರದ ಸಂಪುಟ ಸಂಖ್ಯೆ-156, ಸಂಚಿಕೆ ಸಂಖ್ಯೆ-75ರ ಭಾಗ IV-ಎ ರಲ್ಲಿ ಅಧಿಕೃತವಾಗಿ ಪ್ರಕಟಿಸಲಾಗಿದೆ) ಇದರ ಅಧಿಕೃತ ಕನ್ನಡ ಭಾಷಾಂತರವನ್ನು The Karnataka Official Language Act, 1963 (Karnataka Act 26 of 1963) ರ ಪ್ರಕರಣ 5Aರ ಅಡಿಯಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ಪತ್ರಿಕೆಯಲ್ಲಿ (ಭಾಗ-IV A) ಪ್ರಕಟಿಸಲು ಆದೇಶಿಸಲಾಗಿದೆ.

ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಅಧ್ಯಾದೇಶ, 2020 (2021ರ ಕರ್ನಾಟಕ ಅಧ್ಯಾದೇಶ ಸಂ.01)ರ 20ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ (ಜಾನುವಾರುಗಳ ಸಾಗಾಣಿಕೆ) ನಿಯಮಗಳು, 2021 ರ ಕರಡನ್ನು, ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಅಧಿಕೃತ ರಾಜ್ಯಪತ್ರದಲ್ಲಿ ಅದು ಪ್ರಕಟಗೊಂಡ ದಿನಾಂಕದಿಂದ ಹದಿನೈ ದಿನಗಳ ಒಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ, ಅಧಿಸೂಚನೆ ಸಂಖ್ಯೆ: ಪಸಂಮೀ 261 ಸಲೆವಿ 2015 (ಭಾಗ-1), ದಿನಾಂಕ:16.01.2021 ರಲ್ಲಿ 16ನೇ ಜನವರಿ 2021ರ ಕರ್ನಾಟಕ ವಿಶೇಷ ರಾಜ್ಯಪತ್ರದ ಸಂಚಿಕೆ ಸಂಖ್ಯೆ- 48ರ ಭಾಗ IV-ಎ ರಲ್ಲಿ ಪ್ರಕಟಿಸಿದ್ದರಿಂದ;

ಮತ್ತು, ಸದರಿ ರಾಜ್ಯಪತ್ರವನ್ನು ದಿನಾಂಕ:16.01.2021ರಂದು ಸಾರ್ವಜನಿಕರಿಗೆ ದೊರಕುವಂತೆ ಮಾಡಿದ್ದರಿಂದ.

ಮತ್ತು, ಸದರಿ ಕರಡಿಗೆ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದಿದ್ದು, ಅವುಗಳನ್ನು ರಾಜ್ಯ ಸರ್ಕಾರವು ಪರಿಶೀಲಿಸಿರುವುದರಿಂದ;

ಈಗ, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1890 (1899ರ ಕರ್ನಾಟಕ ಅಧಿನಿಯಮ ಸಂಖ್ಯೆ 3)ರ 24ನೇ ಪ್ರಕರಣದೊಂದಿಗೆ ಓದಿಕೊಂಡಂತೆ, ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಅಧಿನಿಯಮ, 2020 (2021ರ ಕರ್ನಾಟಕ ಅಧಿನಿಯಮ ಸಂ.01)ರ 20ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಮುಂದಿನ ನಿಯಮಗಳು ರಚಿಸುತ್ತದೆ, ಎಂದರೆ:

ನಿಯಮಗಳು

1. **ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ (ಜಾನುವಾರುಗಳ ಸಾಗಾಣಿಕೆ) ನಿಯಮಗಳು, 2021 ಎಂದು ಕರೆಯತಕ್ಕದ್ದು.

   (2) ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಅವು ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು: (1) ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) **"ಅಧಿನಿಯಮ"** ಎಂದರೆ, ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಅಧಿನಿಯಮ, 2020 (2021ರ ಕರ್ನಾಟಕ ಅಧಿನಿಯಮ ಸಂಖ್ಯೆ 01);

(ಬಿ) **"ಮಾಲೀಕತ್ವದ ದಾಖಲೆ"** ಎಂದರೆ, ಜಾನುವಾರು ಮಾಲೀಕನ ಆಧಾರ್ ಕಾರ್ಡ್ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಪ್ಯಾನ್ ಕಾರ್ಡ್ ಅಥವಾ ಪಡಿತರ ಚೀಟಿ ಅಥವಾ ವಾಹನ ಚಾಲನಾ ಪರವಾನಗಿ ಅಥವಾ ನರೇಗಾ ಕಾರ್ಡ್ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ನೀಡಿದ ಯಾವುದೇ ಇತರ ಭಾವಚಿತ್ರವಿರುವ ಗುರುತಿನ ಚೀಟಿಯ ಸ್ವಯಂ ದೃಢೀಕೃತ ಛಾಯಾಪ್ರತಿಯೊಂದಿಗೆ ಪ್ರತಿಯೊಂದು ಜಾನುವಾರಿನ ವಿವರವುಳ್ಳ ಪಶು ಕಿವಿ ಓಲೆ (ear tag), ಮಾಲೀಕರ ವಿವರವು ಕಿವಿ ಓಲೆ (ear tag) ಯಲ್ಲಿ ಇರುವಂತೆಯೇ ಇರತಕ್ಕದ್ದು (ಮಾಲೀಕರ ಹೆಸರನ್ನು ಕಿವಿ ಓಲೆ (ear tag) ಯಲ್ಲಿ ನಮೂದಿಸತಕ್ಕದ್ದು):

ಪರಂತು, ಕಿವಿ ಓಲೆ (ear tag) ಸೌಲಭ್ಯವು ಇಲ್ಲದಿರುವ ಕಡೆಯಲ್ಲಿ, ಜಾನುವಾರಿನ ಮಾಲೀಕನ ಆಧಾರ್ ಕಾರ್ಡ್ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಪಾನ್ ಕಾರ್ಡ್ ಅಥವಾ ಪಡಿತರ ಚೀಟಿ ಅಥವಾ ವಾಹನ ಚಾಲನಾ ಪರವಾನಗಿ ಅಥವಾ ನರೇಗಾ ಕಾರ್ಡ್ ಮತ್ತು ಯಾವುದೇ ಇತರ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ನೀಡಿದ ಭಾವಚಿತ್ರವಿರುವ ಗುರುತಿನ ಚೀಟಿಯ ಸ್ವಯಂ ದೃಢೀಕರಣ ಮಾಡಿದ ಛಾಯಾ ಪ್ರತಿಯೊಂದಿಗೆ ಈ ನಿಯಮಗಳಿಗೆ ಅನುಬಂಧಿಸಲಾದ ನಮೂನೆ-ಎ ಯಲ್ಲಿ ನಿರ್ದಿಷ್ಟಪಡಿಸಿದ ಮಾಲೀಕತ್ವ ವಿವರಪತ್ರ.

(ಸಿ) **"ಪ್ರಕರಣ"** ಎಂದರೆ, ಅಧಿನಿಯಮದ ಪ್ರಕರಣ, ಮತ್ತು

(ಡಿ) **"ಸಾಗಣಿಕೆ ಪ್ರಮಾಣಪತ್ರ"** ಎಂದರೆ, ಜಾನುವಾರುಗಳು ಉದ್ದೇಶಿತ ಸಾರಿಗೆ ಸಾಧನಗಳ ಮೂಲಕ ಸಾಗಾಣಿಕೆ ಮಾಡುವುದಕ್ಕೆ ಸುಸ್ಥಿತಿಯಲ್ಲಿವೆ ಮತ್ತು ಅವುಗಳು ಯಾವುದೇ ಸೋಂಕುಕಾರಕ ಅಥವಾ ಸಾಂಕ್ರಾಮಿಕ ಅಥವಾ ಪರಾವಲಂಬಿ

ಸೋಂಕಿನ ರೋಗಗಳಿಂದ ಬಳಲುತ್ತಿಲ್ಲ ಎಂಬ ಬಗ್ಗೆ ಕಾರ್ಯವ್ಯಾಪ್ತಿಯ ಪಶುವೈದ್ಯಾಧಿಕಾರಿಯಿಂದ ನೀಡಲಾದ ಪ್ರಯಾಣದ ಕಾಲಾವಧಿವರೆಗೆ ಸಿಂಧುವಿರುವಂತೆ ನೀಡಲಾಗುವ ಈ ನಿಯಮಗಳ ಮೇರೆಗೆ ನೀಡಿದ ಪ್ರಮಾಣಪತ್ರ ಮತ್ತು ಇದರಲ್ಲಿ,-

I. ಪಶುಗಳ ಸಾಗಣೆಗೂ ಮೊದಲು ಪ್ರಮಾಣಪತ್ರವನ್ನು ಕೊಡುವುದಕ್ಕಾಗಿ ಅನುಮತಿಗಾಗಿ ಅರ್ಜಿಸಲ್ಲಿಸುವುದಕ್ಕೆ ಪ್ರಪತ್ರ.
II. ಪಶುಗಳನ್ನು ಸಾಗಿಸುವ ಯೋಗ್ಯತಾ ಪ್ರಮಾಣ ಪತ್ರದ ಪ್ರಪತ್ರ.
III. ಪ್ರಾಣಿಹಿಂಸಾ ಪ್ರತಿಬಂಧಕ ಅಧಿನಿಯಮ, 1960 (1960ರ ಕೇಂದ್ರ ಅಧಿನಿಯಮ ಸಂಖ್ಯೆ 59) ರ ಮೇರೆಗೆ ರಚಿಸಿದ ಪ್ರಾಣಿಗಳ ಸಾಗಾಣಿಕೆ ನಿಯಮಗಳು 2001ರ 96ನೇ ನಿಯಮದ ಮೇರೆಗೆ ನೀಡಲಾದ ಪ್ರಮಾಣಪತ್ರಗಳು ಒಳಗೊಳ್ಳುತ್ತವೆ.

(2) ಈ ನಿಯಮಗಳಲ್ಲಿ ಬಳಸಿದ, ಆದರೆ ಪರಿಭಾಷಿಸಿಲ್ಲದ ಇತರೆ ಪದಗಳು ಮತ್ತು ಪದಾವಳಿಗಳು ಅಧಿನಿಯಮದಲ್ಲಿ ಅವುಗಳಿಗೆ ನೀಡಿರುವಂಥದ್ದೇ ಅರ್ಥವನ್ನು ಹೊಂದಿರತಕ್ಕದ್ದು.

3. ಜಾನುವಾರುಗಳನ್ನು ಸಾಗಣಿಕೆ ಮಾಡುವ ವ್ಯಕ್ತಿಯ ಜವಾಬ್ದಾರಿ.- (1) ನೈಜ ಕೃಷಿ ಅಥವಾ ಪಶು ಸಂಗೋಪನಾ ಉದ್ದೇಶಗಳಿಗಾಗಿ ಯಾವುದೇ ರೂಪದ ಸಾರಿಗೆಯಲ್ಲಿ ಅಥವಾ ಸಾರಿಗೆ ಸಾಧನಗಳಲ್ಲಿ ಯಾವುದೇ ಜಾನುವಾರನ್ನು ಸಾಗಿಸಲು ಉದ್ದೇಶಿಸಿರುವ ಪ್ರತಿಯೊಬ್ಬ ವ್ಯಕ್ತಿಯು, ಸಾಗಾಣಿಕೆ ಮಾಡುತ್ತಿರುವ ಜಾನುವಾರಿಗೆ ಸಂಬಂಧಿಸಿದಂತೆ ಸಾಗಾಣಿಕೆ ಪ್ರಮಾಣಪತ್ರ, ಮಾಲೀಕತ್ವದ ದಾಖಲೆ ಮತ್ತು ಪಶುವೈದ್ಯಕೀಯ ಪ್ರಥಮ ಚಿಕಿತ್ಸಾ ಸಾಧನವನ್ನು ಹೊಂದಿದ್ದರೆ ಮಾತ್ರವೇ ಹಾಗೆ ಸಾಗಣೆ ಮಾಡತಕ್ಕದ್ದು.

(2) ನೈಜ ಕೃಷಿ ಅಥವಾ ಹೈನುಗಾರಿಕೆಯ(ಹಾಲಿನ) ಉದ್ದೇಶಕ್ಕಾಗಿ ಇತರೆ ರಾಜ್ಯಗಳಿಂದ ಜಾನುವಾರುಗಳನ್ನು ಕೊಳ್ಳಲು ಬಯಸುವಂಥ ಯಾರೇ ರೈತ ಅಥವಾ ವ್ಯಕ್ತಿಯು ಆಯಾ ರಾಜ್ಯದ ತಾಲ್ಲೂಕು ದಂಡಾಧಿಕಾರಿ ದರ್ಜೆಗಿಂತ ಕಡಿಮೆಯಿಲ್ಲದ ಅಧಿಕಾರಿಯಿಂದ ಸಮ್ಮತಿ ಪತ್ರವನ್ನು ಪಡೆಯತಕ್ಕದ್ದು. ಅಂತಹ ವ್ಯಕ್ತಿಯು ಖುದ್ದಾಗಿ ಅಥವಾ ಆನ್‌ಲೈನ್ ಮೂಲಕ ಸಾಗಾಣಿಕೆ ಪ್ರಮಾಣ ಪತ್ರವನ್ನು ಕಾರ್ಯವ್ಯಾಪ್ತಿಯ ಪಶುವೈದ್ಯಾಧಿಕಾರಿಯಿಂದ ಪಡೆದು ಕೊಳ್ಳತಕ್ಕದ್ದು.

(3) ಅಂತಹ ವ್ಯಕ್ತಿಯು, ಸಾಗಾಣಿಕೆ ಪ್ರಮಾಣಪತ್ರಕ್ಕಾಗಿ ಮನವಿಯನ್ನು ಮಾಡುವ ಸಂದರ್ಭದಲ್ಲಿ ಕಾರ್ಯವ್ಯಾಪ್ತಿಯ ಪಶುವೈದ್ಯಾಧಿಕಾರಿಗೆ ಮಾಲೀಕತ್ವದ ದಾಖಲೆಯ ಒಂದು ಸೆಟ್ಟನ್ನು ಸಲ್ಲಿಸತಕ್ಕದ್ದು.

(4) ಸಾಗಾಣಿಕೆ ಪ್ರಮಾಣಪತ್ರ, ಮಾಲೀಕತ್ವದ ದಾಖಲೆ ಮತ್ತು ಪಶುವೈದ್ಯಕೀಯ ಪ್ರಥಮ ಚಿಕಿತ್ಸಾ ಸಾಧನ ಇಲ್ಲದೆ ಇದ್ದ ಪಕ್ಷದಲ್ಲಿ ಸಾರಿಗೆ ಸೇವೆಗಳನ್ನು ಒದಗಿಸುವ ವ್ಯಕ್ತಿಗಳು ಸಾಗಾಣಿಕೆ ಕಾರ್ಯವನ್ನು ಒಪ್ಪಿಕೊಳ್ಳಲು ನಿರಾಕರಿಸತಕ್ಕದ್ದು.

(5) ಜಾನುವಾರುಗಳ ಮಾಲೀಕ, ಸಾರಿಗೆ ಸಾಧನಗಳ ಮಾಲೀಕ, ಸಾರಿಗೆ ಸಾಧನಗಳ ಚಾಲಕ ಅಥವಾ ಅನುಚರ, ಜಾನುವಾರುಗಳ ಪರಿಚಾರಕ ಮತ್ತು ಮಾಲೀಕನು ಸ್ವಾಭಾವಿಕ ವ್ಯಕ್ತಿಯಾಗಿಲ್ಲದಿರುವಂಥ ಸಂದರ್ಭದಲ್ಲಿ ಪ್ರಭಾರ ಹೊಂದಿರುವ ವ್ಯಕ್ತಿಯು, ಈ ನಿಯಮಗಳಿಗೆ ಅಥವಾ ಜಾನುವಾರುಗಳನ್ನು ಸಾಗಾಣಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು

ಮಾಡಿದ ಇತರ ಯಾವುದೇ ನಿಯಮಗಳಿಗೆ ಅನುಸಾರವಾಗಿ ಜಾನುವಾರುಗಳನ್ನು ಸಾಗಣೆ ಮಾಡಲು ಜಂಟಿಯಾಗಿ ಮತ್ತು ಸಮಾನವಾಗಿ ಹೊಣೆಗಾರರಾಗಿರತಕ್ಕದ್ದು.

(6) ಜಾನುವಾರು ಸಾಗಾಣಿಕೆ ವಾಹನದಲ್ಲಿ ಸಾಗಿಸುವ ಪ್ರತಿಯೊಂದು ರವಾನೆ ಸರಕು ರವಾನೆಗಾರನ ಮತ್ತು ಮಾಲು ಸ್ವೀಕರಿಸುವವನ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ದಪ್ಪನಾದ ಕೆಂಪು ಅಕ್ಷರದಲ್ಲಿ ತೋರಿಸುವ ಲೇಬಲ್ ಅನ್ನು ಹೊಂದಿರತಕ್ಕದ್ದು.

(7) ಜಾನುವಾರುಗಳನ್ನು ವಾಹನಗಳಿಗೆ ಹತ್ತಿಸಲು ಮತ್ತು ವಾಹನಗಳಿಂದ ಇಳಿಸಲು ಸೂಕ್ತವಾದ ಹಗ್ಗ ಮತ್ತು ದಿಬ್ಬಗಳನ್ನು ಬಳಸತಕ್ಕದ್ದು.

(8) ಜಾನುವಾರುಗಳಿಗೆ ಸರಿಯಾಗಿ ಮೇವು ನೀಡಿ ನೀರುಣಿಸಿದ ನಂತರ ಅವುಗಳನ್ನು ವಾಹನಕ್ಕೆ ತುಂಬತಕ್ಕದ್ದು. ಸಾಕಷ್ಟು ಮೇವನ್ನು ತಿನ್ನಿಸಿ ಬೇಕಾಗುವಷ್ಟು ಮೇವನ್ನು ಕಾಯ್ದಿರಿಸಿಕೊಂಡು ಅದನ್ನು ಪ್ರಯಾಣದುದ್ದಕ್ಕೂ ಕೊಂಡೊಯ್ಯತಕ್ಕದ್ದು. ಜಾನುವಾರುಗಳ ಸಾಗಣೆಯ ಅವಧಿಯಲ್ಲಿ, ಮಾರ್ಗಮಧ್ಯದಲ್ಲಿ ನೀರುಣಿಸುವ ವ್ಯವಸ್ಥೆಯನ್ನು ಮಾಡಿರತಕ್ಕದ್ದು ಮತ್ತು ತುರ್ತು ಸಂದರ್ಭಗಳಿಗಾಗಿ ಸಾಕಷ್ಟು ಪ್ರಮಾಣದ ನೀರನ್ನು ಕೊಂಡೊಯ್ಯತಕ್ಕದ್ದು.

(9) ಜಾನುವಾರುಗಳನ್ನು ವಾಹನಕ್ಕೆ ಹತ್ತಿಸುವಾಗ ಮತ್ತು ವಾಹನದಿಂದ ಇಳಿಸುವಾಗ ಮತ್ತು ಅವುಗಳ ಸಾಗಣೆಯ ಅವಧಿಯಲ್ಲಿ ಜಾನುವಾರುಗಳಿಗೆ ಯಾವುದೇ ಗಾಯವಾಗದಂತೆ ರಕ್ಷಿಸಲು ಯುಕ್ತ ಎಚ್ಚರವಹಿಸತಕ್ಕದ್ದು. ವಾಹನದಲ್ಲಿ ಸಾಕಷ್ಟು ಗಾಳಿ ವ್ಯವಸ್ಥೆ ಇರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(10) ಎಂಟು ತಿಂಗಳ ವರೆಗಿನ ಗರ್ಭಧರಿಸಿರುವ ಜಾನುವಾರುಗಳನ್ನು ಸಾಗಣೆ ಮಾಡತಕ್ಕದ್ದು.
ಪರಂತು, ವಾಹನದಲ್ಲಿ ಸಮರ್ಪಕ ಮೆತ್ತನೆಯ ಹಾಸಿನ ವ್ಯವಸ್ಥೆ ಕಲ್ಪಿಸುವುದು ಮತ್ತು ವಾಹನದಲ್ಲಿ ಸಾಕಷ್ಟು ಸ್ಥಳಾವಕಾಶ ಹೊಂದಿರುವುದು ಮತ್ತು ವಾಹನದ ವೇಗದ ಮಿತಿಯು ಗಂಟೆಗೆ 20 ಕಿ.ಮೀ ಇರುವುದು ಮೊದಲಾದಂತಹ ಸಾಕಷ್ಟು ಸುರಕ್ಷತಾ ಕ್ರಮಗಳನ್ನು ಅನುಸರಿಸತಕ್ಕದ್ದು.

(11) ವೈದ್ಯಕೀಯ ತುರ್ತು ಸಂದರ್ಭದಲ್ಲಿ, ಜಾನುವಾರನ್ನು ನೋಡಿಕೊಳ್ಳುವ ವ್ಯಕ್ತಿಯು ಹತ್ತಿರದ ಸ್ಥಳೀಯ ಪಶು ವೈದ್ಯರನ್ನು ತಮ್ಮ ಜಾನುವಾರಿನ ಮಾಲೀಕತ್ವದ ದಾಖಲಾತಿಗಳೊಂದಿಗೆ ಭೇಟಿ ಮಾಡತಕ್ಕದ್ದು ಮತ್ತು ಪಶುವೈದ್ಯರಿಂದ ಜಾನುವಾರಿನ ಆರೋಗ್ಯ ತಪಾಸಣೆ ಮಾಡಿಸತಕ್ಕದ್ದು. ಒಂದು ವೇಳೆ ಪಶು ವೈದ್ಯರು ಖಾಯಿಲೆಯಾಗಿರುವ ಜಾನುವಾರಿಗೆ ತಕ್ಕ ಚಿಕಿತ್ಸೆಯನ್ನು ನೀಡಲಿಕ್ಕಾಗದು ಎಂದು ಭಾವಿಸಿದರೆ, ಆಗ ಅವರು ಹತ್ತಿರದಲ್ಲಿರುವ ಪಾಲಿ ಕ್ಲಿನಿಕ್ ಅಥವಾ ರೆಫರಲ್ ಆಸ್ಪತ್ರೆಗೆ ಜಾನುವಾರನ್ನು ಕಳುಹಿಸಿಕೊಡತಕ್ಕದ್ದು. ನಂತರ, ಮಾಲೀಕನು ಜಾನುವಾರಿನ ವೈದ್ಯಕೀಯ ತುರ್ತು ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸಾಗಾಣಿಕೆ ಪತ್ರವನ್ನು ನಂತರ ಪಡೆಯಲಾಯಿತು ಎಂದು ತಿಳಿಸಿ ಕಾರ್ಯವ್ಯಾಪ್ತಿಯ ಪಶುವೈದ್ಯಾಧಿಕಾರಿಗೆ ಸಾಧ್ಯವಾದಷ್ಟು ಎರಡು ವಾರಗಳ ಒಳಗಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸತಕ್ಕದ್ದು.

4. ರಸ್ತೆಯ ಮೂಲಕ ಜಾನುವಾರುಗಳ ಸಾಗಾಣಿಕೆ.- (1) ಕೇಂದ್ರ ಮೋಟಾರು ವಾಹನ (ಹನ್ನೊಂದನೇ ತಿದ್ದುಪಡಿ) ನಿಯಮಗಳು, 2015ರ ಉಪಬಂಧಗಳ ಪ್ರಕಾರ ಜಾನುವಾರುಗಳನ್ನು ವಿಶೇಷವಾಗಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಿಂದ ಪರವಾನಿಗೆ ಪಡೆದ ಮೋಟಾರ್ ವಾಹನದಲ್ಲೇ ಸಾಗಣೆ ಮಾಡತಕ್ಕದ್ದು.

(2) ರಸ್ತೆಯ ಮೂಲಕ ಜಾನುವಾರುಗಳ ಸಾಗಾಣೆಗಾಗಿ ಬಳಸುವ ವಿಶೇಷವಾಗಿ ಪರವಾನಿಗೆ ಪಡೆದ ಮೋಟಾರ್ ವಾಹನಗಳು ಈ ಕೆಳಕಂಡ ವಿಶಿಷ್ಟತೆಗಳಿಗೆ ಅನುಸಾರವಾಗಿರತಕ್ಕದ್ದು, ಎಂದರೆ:-

(ಎ) ಎರಡಕ್ಕಿಂತ ಹೆಚ್ಚು ಪಶುಗಳನ್ನು ಸಾಗಿಸುವ ಮೋಟಾರು ವಾಹನಗಳು ಅವುಗಳ ವಿನ್ಯಾಸ ವ್ಯವಸ್ಥೆಯಲ್ಲಿ ಶಾಶ್ವತ ವಿಭಾಗಗಳನ್ನು ಹೊಂದಿರತಕ್ಕದ್ದು. ಇದರಿಂದಾಗಿ, ಪಶುಗಳನ್ನು ಪ್ರತಿ ವಿಭಾಗದಲ್ಲಿ ಪ್ರತ್ಯೇಕವಾಗಿ ಇಟ್ಟು ಸಾಗಿಸಬಹುದಾಗಿರುತ್ತದೆ. ಅಂತಹ ವಿಭಾಗಗಳ ಅಳತೆಯು ಈ ಕೆಳಕಂಡ ಅಳತೆಗಳಿಗಿಂತ ಕಡಿಮೆ ಇರತಕ್ಕದ್ದಲ್ಲ.

ಎಂದರೆ:-

(i) 100 ಕೆ.ಜಿ. ತೂಕಕ್ಕಿಂತ ಕಡಿಮೆ ಇರುವ ಕರು ಮತ್ತು ಜಾನುವಾರುಗಳು = 1.5 ಚದರ ಮೀಟರ್‌ಗಳು (1 ಮೀಟರ್ X 1.5 ಮೀಟರ್‌ಗಳು).

(ii) 100 ಕೆ.ಜಿ. ತೂಕಕ್ಕಿಂತ ಮೇಲ್ಪಟ್ಟ ಜಾನುವಾರುಗಳು = 2 ಚದರ ಮೀಟರ್‌ಗಳು (1 ಮೀಟರ್ X 2 ಮೀಟರ್‌ಗಳು).

(ಬಿ) ಪಶುಗಳನ್ನು ಸಾಗಿಸುವುದಕ್ಕಾಗಿ ಮೀಸಲಿಟ್ಟ ಮೋಟಾರು ವಾಹನಗಳಿಗೆ ಆಹಾರ, ನೀರು ಮತ್ತು ಮೇವನ್ನು ಹೊರತುಪಡಿಸಿ ಬೇರೆ ಯಾವುದೇ ವಸ್ತುವನ್ನು ಸಾಗಿಸಲು ಅನುಮತಿ ಇರತಕ್ಕದ್ದಲ್ಲ. ಎರಡಕ್ಕಿಂತ ಹೆಚ್ಚಲ್ಲದ ಜಾನುವಾರುಗಳು ಅಥವಾ ಅವುಗಳ ಕರುಗಳನ್ನು ಹದಿನೈದು ಕಿಲೋಮೀಟರ್‌ನ ಸ್ಥಳೀಯ ಪ್ರದೇಶದಲ್ಲಿ ಸಾಗಿಸಬೇಕಾದ ಸಂದರ್ಭದಲ್ಲಿ ಅವುಗಳ ಸಾಗಣೆಗೆ ಸಾರಿಗೆ ಪ್ರಮಾಣ ಪತ್ರದಿಂದ ವಿನಾಯಿತಿ ನೀಡಬಹುದು.

5. ಮೃತ ಜಾನುವಾರುಗಳ ಸಾಗಾಣಿಕೆ:- ಸಾಗಣೆಯ ಅವಧಿಯಲ್ಲಿ ಮೃತಪಟ್ಟ ಜಾನುವಾರನ್ನು ಸಾಗಿಸಬೇಕಾದ ಸಂದರ್ಭದಲ್ಲಿ ಮಾಲೀಕನು ಸ್ಥಳೀಯ ಕಾರ್ಯವ್ಯಾಪ್ತಿಯ ಪಶುವೈದ್ಯಾಧಿಕಾರಿಯಿಂದ ಮರಣೋತ್ತರ ಪರೀಕ್ಷೆಯ ವರದಿ ಅಥವಾ ಮರಣ ಪ್ರಮಾಣ ಪತ್ರವನ್ನು ಪಡೆಯಬಹುದು.

The above translation of The Karnataka Prevention of Slaughter and Preservation of Cattle (Transportation of Cattle) Rules, 2021 shall be authoritative text in the Kannada Language under Section 5A of The Karnataka Official Language Act,1963.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಕೆ.ವಿ. ಅಶೋಕ)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಪಶುಸಂಗೋಪನೆ)

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**

ನಮೂನೆ-ಎ

(2ನೇ ನಿಯಮದ (ಬಿ) ಖಂಡದ ಪರಂತುಕವನ್ನು ನೋಡಿ)

ಮಾಲೀಕತ್ವದ ಹೇಳಿಕೆ

_____ಬಿನ್_____ ಆದ ನಾನು ಸುಮಾರು _____ವಯಸ್ಸಿನವನಾಗಿದ್ದು _____
_____
ವಿಳಾಸದಲ್ಲಿ ವಾಸವಾಗಿರುತ್ತೇನೆ.

ಆಧಾರ್ ಕಾರ್ಡ್ ಸಂಖ್ಯೆ:
ಮೊಬೈಲ್/ದೂರವಾಣಿ ಸಂಖ್ಯೆ:
ಸಾಗಾಣೆಯ ಉದ್ದೇಶ

ಪ್ರತಿಯೊಂದು ಜಾನುವಾರಿನ ವಿವರಣೆ	**ವಯಸ್ಸು**

ನಾನು, ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ (ಜಾನುವಾರು ಸಾಗಣೆ) ನಿಯಮಗಳು, 2021ರ 3 ರಿಂದ 5ರ ವರೆಗಿನ ನಿಯಮಗಳನ್ನು ಓದಿ ಅರ್ಥ ಮಾಡಿಕೊಂಡಿರುತ್ತೇನೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಜಾನುವಾರಿನ ಮಾಲೀಕನ ಸಹಿ.

ಸ್ಥಳ:
ದಿನಾಂಕ:

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU